ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ. The copies will be circulated a little later to all the members.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿ).—ಸ್ವಾಮಿ, ೧೯೫೦ನೇ ಇಸವಿಯ ರಾಜ್ಯ ಸಾರಿಗೆ ಸಂಸ್ಥೆ ಶಾಸನದ ೩೫ (೨)ನೇ ಕಲಮಿನ ಮೇರೆಗೆ ಹೊರಡಿಸಿದ ೧೯೮೧–೮೨ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೨೧ನೇ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಎಂ. ಮಹದೇವ್.—ಸ್ವಾಮಿ, ಈ ಸದನ ಈವೊತ್ತೇ ಕೊನೇ ದಿವಸವಾದ್ದರಿಂದ ಇಂದು ನನಗೆ ಮಾತನಾಡಲು ಅವಕಾಶ ಕೊಡದೇ ಹೋದರೆ ಧರಣಿ ಹೂಡುತ್ತೇನೆ.

ಉಪಾಧ್ಯಕ್ಷರು.—ನಿಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ತೆಗೆದು ಕೊಂಡಿರತಕ್ಕಂಥ ಕಾರ್ಯಕಲಾಪ ಮೊದಲು ಮುಗಿಯಲಿ.

ಶ್ರೀ ಧನಂಜಯಕುಮಾರ್.—ಸ್ವಾಮಿ, ತಾವು ಈ ಕಡೆಯೂ ನೋಡಬೇಕು, ಬರೆ ಅತ್ತ ಕಡೆಯೇ ನೋಡುತ್ತಿದ್ದೀರಿ, ಈ ಕಡೆಯಲ್ಲಿ ಕುಳಿತಿರತಕ್ಕಂಥಾವರ ಮೇಲೆ ನೋಡುವುದೇ ಇಲ್ಲ. ಅದಕ್ಕೆ ಅವರು ಹಾಗೆ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.—ನಾನಂ ಎಲ್ಲಾ ಕಡೆಯೂ ನೋಡುತ್ತಿದ್ದೇನೆ. ಒಂದೇ ಕಡೆ ನೋಡುತ್ತಾ ಇಲ್ಲ. ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಮೊದಲು ಈ ಕಾರ್ಯಕಲಾಪ ಮುಗಿಯಲಿ.

ಮಂನವಿಗಳನ್ನೊಪಿಸುವುದು :

(ಅ) ಶ್ರೀ ಎಂ. ಎಸ್. ಪಾಟೀಲ.—ಸ್ವಾಮಿ (೧) ಬೆಂಗಳೂರು ಪೂನಾ ರಸ್ತೆಯಲ್ಲಿ ಸೇತುವೆ ನಿರ್ಮಾಣ ಹಾಗೂ ಹರಗಪುರದಿಂದ ಗಾಡಾಕ್ಕೆ ಕೂಡು ರಸ್ತೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹರಗಾಪುರದ ಗ್ರಾಮಸ್ಥರು ಸಹಿ ಮಾಡಿದ ಹಾಗೂ (೨) ಕುಡಿಯುವ ನೀರಿನ ಕೊಳಾಯಿಗಳನ್ನು ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಬೆಳಗಾಂವಿ ಜಿಲ್ಲೆಯ ಗ್ರಾಮಸ್ಥರು ಸಹಿ ಮಾಡಿದ ಮನವಿಗಳನ್ನು ಈ ಸದನಕ್ಕೆ ತಮ್ಮ ಮುಖಾಂತರ ಒಪ್ಪಿಸುತ್ತೇನೆ.

(ಅ) ಶ್ರೀ ಕೆ. ರಾಮಭಟ್.— ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮನ್‌ಗಳು ತಮ್ಮ ವೇತನಗಳನ್ನು ಕ್ರಮವಾಗಿ ಪಾವತಿ ಮಾಡದಿರುವ ಹಾಗೂ ಇತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಅವರು ಸಹಿ ಮಾಡಿದ ಮನವಿಯನ್ನು ಈ ಸದನಕ್ಕೆ ತಮ್ಮ ಮುಖಾಂತರ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು.—ಮನವಿಗಳನ್ನು ಒಪ್ಪಿಸಲಾಗಿದೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ನಾನಂ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದು ಈವೊತ್ತು ಬಂದಿಲ್ಲ. ಈ ಸದನವೂ ಈವೊತ್ತೆ ಕೊನೆಯಂ ದಿನವಾಗಿರುತ್ತೆ.

ಉಪಾಧ್ಯಕ್ಷರು.—ಮೊದಲು ಈ ಅಜೆಂಡಾದಲ್ಲಿರುವ ಎರಡು ಕಾಲಿಂಗ್ ಅಟೆನ್‌ಷನ್ ನೋಟೀಸ್ ಮುಗಿಯಂಲಿ, ಆಮೇಲೆ ನಿಮ್ಮ ವಿಚಾರ ಏನು ಇದೆ ಅನ್ನುವುದನ್ನು ಕೇಳುತ್ತೇನೆ. ಆಮೇಲೆ ಹೇಳಿ.

ಗಮನ ಸೆಳೆಯಂವ ಸೂಚನೆಗಳು

ವಿಷಯ.—(೧) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ೬,೦೦೦ ಎಕರೆ ವಿಸ್ತೀರ್ಣದ ಕಬ್ಬು ಬೆಳೆಗೆ ನೀರನ್ನು ಬಿಡುಗಡೆ ಮಾಡದಿರುವ ಬಗ್ಗೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) —ಮಾನ್ಯ ಉಪಾಧ್ಯಕ್ಷರೇ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸುಮಾರು ೬೦೦೦ ಎಕರೆ ವಿಸ್ತೀರ್ಣದ ಕಬ್ಬು ಬೆಳೆಗೆ ನೀರನ್ನು ಬಿಡುಗಡೆ ಮಾಡದಿರುವ ವಿಚಾರವನ್ನು ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.